೧೧) ಕುಂದಾಪುರ ತಾಲ್ಲೂಕು ಬೈಂದೂರು ಬಳಿ ಇರುವ 'ಕೂಸಿನ ಬೇಟ್' ಎಂಬಲ್ಲಿ ಸುಮಾರು ೭೦ ಹೆಕ್ಟೇರು ಕಾಡು ಕಡಿಯಲು ಪರವಾನಗಿಯನ್ನು ನೀಡಿರುವುದರ ಪರಿಣಾಮದ ಬಗ್ಗೆ

೧೨-೦೦ ಮಧ್ಯಾಹ್ನ

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದ ರೈತರು ತಮ್ಮ ವ್ಯವಸಾಯಕ್ಕಾಗಿ ಬೇಕಾದ ಸೊಪ್ಪು, ತರಗೆಲೆಗಳನ್ನು ಸ್ವಲ್ಪ ಒಳಭಾಗದಲ್ಲಿರುವ ಸರಕಾರಿ ಸ್ವಾಮ್ಯದ ಸುರಕ್ಷಿತ ಅರಣ್ಯಗಳಿಂದ ತರುತ್ತಿದ್ದಾರೆ. ಹಾಗೆಯೇ ಒಣಕಟ್ಟಿಗೆ ಸಹ, ಇದಕ್ಕೆ ಅರಣ್ಯ ಇಲಾಖೆಯ ಪರವಾನಿಗೆಯೂ ಇತ್ತು. ಇತ್ತೀಚಿನ ದಿನಗಳಲ್ಲಿ ಅರಣ್ಯ ಇಲಾಖೆಯವರು ಸುರಕ್ಷಿತ ಅರಣ್ಯ ಕೆಡಿಸಿ ಅಲ್ಲಿ ಗೇರು, ಅಕೇಶಿಯಾ, ಸರ್ವೆ (ಗಾಳಿ) ಇತ್ಯಾದಿ ಸೊಪ್ಪು ತರಗೆಲೆ ಸಿಗದ ಗಿಡಗಳನ್ನು ನೆಡುವುದು, ಪೂರ್ತಿ ಬೆಳೆದ ಮರಗಳನ್ನು ಮಾತ್ರ ತೆಗೆಯುವ ಬದಲು ಇಡೀ ಕಾಡನ್ನೇ ಕಡಿಸುವುದು ಕಂಡು ಬಂದಿದ್ದು ಇದರಿಂದ ರೈತರು ತುಂಬ ಆತಂಕಕ್ಕೊಳಗಾಗಿದ್ದಾರೆ.

ಕುಂದಾಪುರ ತಾಲ್ಲೂಕು ಬೈಂದೂರು ಬಳಿ ಇರುವ 'ಕೂಸಿನ ಬೇಟ್' ಎಂಬಲ್ಲಿ ಸುಮಾರು ೭೦ ಹೆಕ್ಟೇರ್ ಕಾಡು ಕಡಿಸಲು ಸರ್ವೆ ಹಾಗೂ ಮಾರ್ಕಿಂಗ್ ನಡೆದಿದೆ ಎಂಬುದಾಗಿ ತಿಳಿದು ಬಂದಿದೆ. ಸಮೂಹ ವೃಕ್ಷ ನಾಶಕ್ಕೆ ಬದಲು, ಬೆಳೆದ ಮರ ಮಾತ್ರ ತೆಗೆದು ಉಳಿದ ಮರಗಳಿಂದಾದರೂ ರೈತರಿಗೆ ಸೊಪ್ಪು, ತರಗೆಲೆ ಹಿಂದಿನಂತೆ ಸಿಗುವ ಸವಲತ್ತು ಒದಗಿಸಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಜಿ. ಎಸ್. ಬಾಗಲ್‌ಕೋಟ್ (ಅರಣ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಉಪ-ಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ ಅವರು ಸುರಕ್ಷಿತ ಅರಣ್ಯ, ಕುಂದಾಪುರ ಜಮೀನಿನ ಮಂತ್ರಿ ಕೆಲವೊಂದು ಪ್ರಸಂಗದಲ್ಲಿ ಕಾಯ್ದಿಟ್ಟ ಅರಣ್ಯದಿಂದಲೂ ಒಣ ಎಲೆ ಮತ್ತು ತಲೆಹೊರೆ ಸೌದೆಯನ್ನು ಒಯ್ಯಲು ಅನುಮತಿ ನೀಡಿರುವುದು ನಿಜ. ಬೈಂದೂರು ಸಮೀಪದ ಕುರ್ಸಿ ಬೆಟ್ಟದ ೭೦ ಹೆಕ್ಟೇರು ಕಾದಿಟ್ಟ ಅರಣ್ಯವನ್ನು ಕಡಿತಲೆ ಮಾಡಿ, ಉರುವಲು ನೆಡುತೋಪು ಬೆಳೆಸುವುದಕ್ಕಾಗಿ ಪ್ರಸ್ತಾವನೆ ಮಾಡಿ ಗಡಿ ಗುರುತಿಸಿತ್ತು, ಆದರೆ ಇತ್ತೀಚೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಕುಂದಾಪುರ ಅವರು ಸದರೀ ಪ್ರದೇಶವನ್ನು ತಪಾಸು ಮಾಡಿ, ಈ ಭಾಗದಲ್ಲಿ ಕಡಿತಲೆ ಮಾಡುವುದು ಬೇಡವೆಂದು ಕೈಬಿಟ್ಟಿದ್ದಾರೆ. ಈಗ ಉತ್ತಮವಾದ ನೈಸರ್ಗಿಕ ಅರಣ್ಯಗಳನ್ನು ಕಡಿತಲೆ ಮಾಡಬಾರದೆಂಬ ನೀತಿಯ ಪ್ರಕಾರ ಸಂಪೂರ್ಣ ಕಡಿತಲೆಯನ್ನು ನಿಲ್ಲಿಸಲಾಗಿದೆ. ಆ ಪ್ರಕಾರ ಅರಣ್ಯದಿಂದ ಕೇವಲ ಸತ್ತ ಮತ್ತು ಬಿದ್ದ ಮರಗಳಿಂದ ಮಾತ್ರ ಸೌದೆ ಮತ್ತು ನಾಟಾಗಳನ್ನು ತೆಗೆಯಲಾಗುತ್ತಿದೆ. ಇಲಾಖೆಯು ಸ್ಥಳೀಯವಾಗಿ ಮಹತ್ವದ ಮತ್ತು ಉಪಯುಕ್ತ ಜಾತಿಯ ಮರಗಳಾದ ಮತ್ತಿ ನಂದಿ, ಹೊನ್ನೆ, ಹಲಸು, ಕರಿಮರ ಮತ್ತು ಗಾಳಿಮರಗಳನ್ನು ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ನೆಡುತೋಪುಗಳನ್ನು ಬೆಂಕಿಯಿಂದ ಮತ್ತು ದನಕರುಗಳಿಂದ ಸಂರಕ್ಷಿಸುವುದಕ್ಕಾಗಿ ಅವುಗಳ ಒಡ್ಡುಗಳ ಮೇಲೆ ೩-೪ ಸಾಲುಗಳಲ್ಲಿ ಅಕೇಶಿಯಾಗಳನ್ನು ಬೆಳೆಯಲಾಗುತ್ತಿದೆ.

ಸ್ಥಾನಿಕ ಜನರಿಗೆ ಸವಲತ್ತುಗಳನ್ನು ಕುಂಠಿತಗೊಳಿಸುವುದಿಲ್ಲ.

೧೨) ಕುಂದಾಪುರ ತಾಲ್ಲೂಕಿನ ಗಂಗೊಳ್ಳಿಯಲ್ಲಿ ೨೩-೩-೧೯೮೮ರ ಮಧ್ಯಾಹ್ನ ಸಂಭವಿಸಿದ ಬೆಂಕಿ ಅನಾಹುತದಲ್ಲಿ ನೊಂದವರಿಗೆ ಪರಿಹಾರ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಕುಂದಾಪುರ ತಾಲ್ಲೂಕಿನ ಗಂಗೊಳ್ಳಿಯಲ್ಲಿ ತಾ. ೨೩ರ ಮಧ್ಯಾಹ್ನ ಸಂಭವಿಸಿದ ಬೆಂಕಿ ಅನಾಹುತದಲ್ಲಿ ೧೩ ಮೀನು ಶೇಖರಣ ಗುಡಿಸಲುಗಳು, ಒಂದು ಚಿಕ್ಕ ಹೋಟೆಲ್, ಒಂದು ಬೀಡಾ ಅಂಗಡಿ ೩ ಸಣ್ಣದ ಗೂಡುಗಳು, ೨ ಗಿಲ್‌ಸೆಟ್ ಯಾಂತ್ರೀಕೃತ ಮೀನುಗಾರಿಕಾ ದೋಣಿಗಳು ಒಂದು ಪರ್ಸೀನ್ ಬಲೆಯುತ ದೋಣಿ ಮತ್ತು ಸುಪಾರು ೨೫೦ ಕೆ.ಜಿ. ತೂಕದ ಹೊಸ ಬಲೆ, ಭಾರೀ ಪ್ರಮಾಣದ ಮೀನು ಸಂಗ್ರಹ, ಇತರ ಮೀನುಗಾರಿಕಾ ಉಪಕರಣಗಳು ನಾಶವಾಗಿ, ಲಕ್ಷಾಂತರ ರೂಪಾಯಿ ನಷ್ಟ ಸಂಭವಿಸಿರುವುದಾಗಿ ತಿಳಿದು ಬಂದಿದೆ. ತೀರ ಬಡವರೂ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ದುರ್ಬಲವರ್ಗದವರೂ, ಅಲ್ಪಸಂಖ್ಯಾತರೂ ಈ

ಹಾನಿಯಿಂದಾಗಿ ನಿರ್ಗತಿಕರಾಗಿರುವ ಸ್ಥಿತಿ ಬಂದಿದೆ. ಈ ಒಗ್ಗೆ ಕೂಡಲೇ ಪರಿಶೀಲನೆ ನಡೆಸಿ, ನೊಂದವರಿಗೆ ಪರಿಹಾರ ಒದಗಿಸಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಸಚಿವರು).—ಮಾನ್ಯ ಅಧ್ಯಕ್ಷರೇ, ದಿನಾಂಕ ೨೩-೩-೧೯೮೮ ರಂದು ಸುಮಾರು ೨-೪೫ ಘಂಟೆಗೆ ಕುಂದಾಪುರ ತಾಲ್ಲೂಕಿನ ಗಂಗೊಳ್ಳಿ ಸಮೀಪದ ಬಂಡೂರು ಹಳ್ಳಿಯಲ್ಲಿ ಸುಣ್ಣ ತಯಾರಿಸುತ್ತಿರುವ ಗುಡಿಸಲಿಗೆ ಬೆಂಕಿ ಹತ್ತಿ ಸುತ್ತಮುತ್ತಲಿನ ಗುಡಿಸಲಿಗೂ ಹರಡಿತು. ಈ ಬೆಂಕಿ ಅನಾಹುತದಿಂದ ೧೨ ಗುಡಿಸಲುಗಳು ಸುಟ್ಟು ಹೋಗಿ ಅದರೊಳಗೆ ಒಂದು ಸಣ್ಣ ಹೋಟೆಲ್ ಎರಡು ಸಣ್ಣ ಡೀಸಿಲ್ ಇಂಜಿನ್ ಬೋಟುಗಳು ಮತ್ತು ಗುಡಿಸಲಿನಲ್ಲಿಟ್ಟಿದ್ದ ಮೀನು ಹಿಡಿಯುವ ನೈಲಾನಿನ ಬಲೆಗಳು ನಾಶವಾಗಿರುತ್ತದೆ. ಯಾರಿಗೂ ಇದರಿಂದ ಪ್ರಾಣಾಹಾನಿಯಾಗಿಲ್ಲ. ಕುಂದಾಪುರದ ಪೋಲೀಸರು ಸ್ಥಳೀಯ ಮೀನುಗಾರರ ಜೊತೆಗೆ ಬೆಂಕಿಯನ್ನು ಆರಿಸಲು ಪ್ರಯತ್ನಪಟ್ಟರು ಆದರೆ ಸಫಲವಾಗಲಿಲ್ಲ ಈ ಬೆಂಕಿ ಅನಾಹುತದಲ್ಲಿ ಸುಮಾರು ಎರಡು ಲಕ್ಷದಷ್ಟು ರೂ.ಗಳ ಹಾನಿಯಾಗಿರುತ್ತದೆ. ನೊಂದವರಿಗೆ ಪರಿಹಾರ ಧನ ಒದಗಿಸುವ ಬಗ್ಗೆ ಕಂದಾಯ ಇಲಾಖೆಯವರು ಸೂಕ್ತ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

೧೩) ಬಳ್ಳಾರಿ ಜಿಲ್ಲೆಯ ತುಂಗಭದ್ರ ಬಲದಂಡೆಯ ಚಾನಲ್ ಕೆಳಗೆ ಬರುವ ಬೆಳೆಗಳಿಗೆ ನೀರು ಬಿಡುವ ಬಗ್ಗೆ.

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೇ, ಈಗ ಪ್ರಸ್ತಾಪ ಮಾಡಬೇಕಿದಿರುವ ವಿಷಯ ಆಂಗ್ಲ ಭಾಷೆಯಲ್ಲಿರುವುದರಿಂದ ತಾವೇ ಓದಿ ಬಿಡಿ ಸ್ವಾಮಿ,

ಅಧ್ಯಕ್ಷರು.—ಬಳ್ಳಾರಿ ಜಿಲ್ಲೆಯ ತುಂಗಭದ್ರ ಬಲದಂಡೆ ಚಾನಲ್‌ನಲ್ಲಿರುವ ಬೆಳೆಗಳಿಗೆ ೧೮ ದಿನಗಳ ಮಟ್ಟಿಗೆ ನೀರನ್ನು ಬಿಡುವ ಬಗ್ಗೆ.

ಶ್ರೀ ಎ ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ೧೦ ದಿನಗಳ ಮಟ್ಟಿಗೆ ನೀರು ಬಿಡುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅದಕ್ಕೆ ಉತ್ತರವನ್ನು ತರಿಸಿಕೊಡುತ್ತೇನೆ,

ಅಧ್ಯಕ್ಷರು,—ಉತ್ತರ ತರಿಸಿಕೊಡುತ್ತಾರೆ. ನೀರನ್ನು ಬಿಡುವ ವ್ಯವಸ್ಥೆ ಸಹ ಮಾಡಲಾಗುತ್ತದೆ. ತವಂಗೆ ಪರಿಹಾರವೂ ಸಿಗುತ್ತದೆ.

ಶ್ರೀ ಕೆ. ವಸಂತ ಬಿ, ಸಾಲಿಯಾನ್(ಆಬ್ಸೆಂಟ್) ಧರ್ಮಪ್ಪನವರೇ, ನಾನು ಕರೆದಾಗ ನೀವು ಆಬ್ಸೆಂಟ್ ಆಗಿರುತ್ತೀರಿ. ಬೇರೆಯವರು ಮಾತನಾಡುವಾಗ ಎದ್ದು ನಿಲ್ಲುತ್ತೀರಿ.

೧೪) ಲೋಕೋಪಯೋಗಿ ಇಲಾಖೆಯಲ್ಲಿ ಇರುವ ಆಕೃತಿ ರಚನಾಕಾರರಿಗೆ ಮುಂಬಡ್ತಿಯ ಅವಕಾಶಗಳಿಲ್ಲದಿರುವುದು

ಶ್ರೀ ಬಿ. ಧರ್ಮಪ್ಪ —ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸರಕಾರದ ಲೋಕೋಪಯೋಗಿ ಇಲಾಖೆಯಲ್ಲಿ ಇರುವ ಆಕೃತಿ ರಚನಕಾರರು (ಡ್ರಾಫ್ಟ್ಸ್‌ಮೆನ್) ಇವರುಗಳಿಗೆ ಮುಂಬಡ್ತಿಯ ಅವಕಾಶಗಳು ಇದ್ದಂತೆ ತಿಳಿದು ಬರುವುದಿಲ್ಲ. ಏಕೆಂದರೆ ೨೫ ರಿಂದ ಸುಮಾರು ೩೦ ವರ್ಷಗಳವರೆವಿಗೂ ಸೇವೆ ಸಲ್ಲಿಸಿದವರಿಗೂ ಯಾವ ಬಡ್ತಿಯೂ ಸಿಕ್ಕಿಲ್ಲವೆಂದು ತಿಳಿದು ಬಂದಿರುತ್ತದೆ. ಆದರೆ ಎಲ್ಲಾ ಇಲಾಖೆಗಳಲ್ಲಿಯೂ ಸಾಮಾನ್ಯವಾಗಿ ಒಂದಲ್ಲ ಒಂದು ರೀತಿ ಬಡ್ತಿ ಸಿಗುತ್ತದೆ. ಆದರೆ ಲೋಕೋಪಯೋಗಿ ಇಲಾಖೆಯಲ್ಲಿರುವ ಆಕೃತಿ ರಚನಕಾರರಿಗೆ (ಡ್ರಾಫ್ಟ್ಸ್‌ಮೆನ್) ಯಾವ ಬಡ್ತಿಯೂ ಇರುವುದಿಲ್ಲ. ಹಾಗೂ ಆಕೃತಿ ರಚನಕಾರರ ಜಾಗದಲ್ಲಿ (ಡ್ರಾಫ್ಟ್ಸ್‌ಮೆನ್) ಬೇರೆ ಹುದ್ದೆಯವರನ್ನು ನೇಮಿಸಿ ಆದರಲ್ಲಿರುವ ಅವಕಾಶವನ್ನು ಸಹ ಕಡಿಮೆ ಮಾಡುತ್ತಾ ಬಂದಂತೆ ಕಾಣುತ್ತದೆ. ಹೀಗೆ ಬಡ್ತಿಯೂ ಇಲ್ಲದೇ ಅವಕಾಶವೂ ಇಲ್ಲವೇ ಅನೇಕ ಡ್ರಾಫ್ಟ್ಸ್‌ಮೆನ್‌ಗಳು ಕೆಲಸಕ್ಕೆ ಸೇರಿದಾಗಿನಿಂದ ಕೆಲಸದಿಂದ ನಿವೃತ್ತಿಯಾಗುವವರೆವಿಗೂ ಒಂದೇ ಹೆಸರಿನ ಹುದ್ದೆಯಲ್ಲಿ ಸೇವೆ ಸಲ್ಲಿಸುವ ಪ್ರಸಂಗವಿದೆ, ಆದುದರಿಂದ ಮಾನ್ಯ ಲೋಕೋಪಯೋಗಿ ಇಲಾಖೆ ಸಚಿವರು ಇದರ ಬಗ್ಗೆ ಗಮನ ಹರಿಸಿ ಇವರಿಗೆ ಬೇರೆ ಹುದ್ದೆಗಳಂತೆ ಬಡ್ತಿ ಮತ್ತೆರೆ ಮಾರ್ಪಾಟುಗಳನ್ನು ಮಾಡಲು ಏನಾದರೂ ಕ್ರಮ ಕೈಗೊಳ್ಳುವಿರಾ ?